ಇವರಿಗೆ,

1) ಮಹಾಲೇಖಪಾಲರು, ಎ ಅಂಡ್ ಇ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಜಿಲ್ಲಾ ಪಂಚಾಯತ್‌ಗಳು.
3) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯತಿ, ರಾಜ್ಯದ ಎಲ್ಲಾ ತಾಲ್ಲೂಕುಗಳು,
4) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು (ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
5) ಎಲ್ಲಾ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
6) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
7) ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
8) ಪ್ರಕಾಶಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸುವ ಸಲುವಾಗಿ
9) ವಿಶೇಷಾಧಿಕಾರಿ ಗಣಕ ಕೋಶ – ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸುವ ಸಲುವಾಗಿ.
10) ಶಾಖಾ ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.

ಪ್ರತಿಗಳನ್ನು ಮಾಹಿತಿಗಾಗಿ;

1) ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಇವರ ಆಪ್ತ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಈಗಾಗಲೇ ಸ್ಥಾಪಿಸಲಾಗಿರುವ ಗ್ರಾಮ ಪಂಚಾಯತಿ ಸಾರ್ವಜನಿಕ ಗ್ರಂಥಾಲಯಗಳಿಗೆ ಅಗತ್ಯ ಕಟ್ಟಡಗಳು ಇಲ್ಲದಿರುವುದನ್ನು ಗಮನಿಸಲಾಗಿದೆ. ಆದುದರಿಂದ. ಸರ್ಕಾರವು 13ನೇ ಹಣಕಾಸಿನ ಯೋಜನೆ, ಸುವರ್ಣ ಗ್ರಾಮೋದಯ ಯೋಜನೆ ಅಥವಾ ಅವಕಾಶವಿರುವ ಇತರೆ ಯಾವುದೇ ಮೂಲಭೂತ ಸೌಕರ್ಯ ಯೋಜನೆಗಳಡಿ ಲಭ್ಯವಿರುವ ಅನುದಾನಗಳನ್ನು ಬಳಸಿಕೊಂಡು ಗ್ರಾಮ ಪಂಚಾಯತ್ ಸಾರ್ವಜನಿಕ ಗ್ರಂಥಾಲಯಗಳಿಗೆ ಕಟ್ಟಡಗಳನ್ನು ನಿರ್ಮಾಣ ಮಾಡಲು ಸೂಚಿಸಲಾಗಿದೆ. ಈ ಸಂಬಂಧ ಹೊರಡಿಸಲಾಗಿರುವ ಸಂಖ್ಯೆ: ಗ್ರಾಅಪ 21 ಗ್ರಾಪಸ 2013, ದಿನಾಂಕ:27.06.2013ರ ಆದೇಶ ಮತ್ತು ದಿನಾಂಕ:01.10.2013ರ ತಿದ್ದುಪಡಿ ಆದೇಶದ ರೀತ್ಯಾ ಕ್ರಮವಹಿಸುವುದು.

15. ನಮ್ಮೂರ ಕೆರೆ ಪರಿಕಲ್ಪನೆಯ ಸಾಕಾರ:

ಪ್ರಾಚೀನ ದಿನಗಳಲ್ಲಿ ಪ್ರತಿ ಹಳ್ಳಿಗಳಿಗ ಹೊಂದಿಕೊಂಡಂತೆ ಒಂದು ಕೆರೆ ಇರುತ್ತಿತ್ತು. ಕೆರೆ ಬರೀ ನೀರಿನ ಸಂಗ್ರಹಗಾರ ಅಷ್ಟೇ ಆಗಿರದೇ ಇದು ಹಲವಾರು ಜೀವ ಸಂಕುಲಗಳ ಆಶ್ರಯ ತಾಣವು ಆಗಿದೆ. ಅಂತೆಯೇ ಅಂತರ್ಜಲ ವೃದ್ಧಿಗೂ ಸಹ ಕೆರೆಗಳು ಪೋಷಕದಾಯಕವಾಗಿರುತ್ತವೆ. ವಾತಾವರಣದ ಉಷ್ಣತೆಯನ್ನು ಸಮತೋಲನದಲ್ಲಿಡಲು ಕೆರೆ ತನ್ನದೇ ಆದ ಪಾತ್ರವನ್ನು ನಿರ್ವಹಿಸುತ್ತದೆ. ಕೃಷಿ ಆಧಾರಿತ ಚಟುವಟಿಕೆಗಳಿಗೆ ನೀರನ್ನು ಒದಗಿಸುವ ಕೆಲಸವನ್ನು ಸಹ ಕೆರೆಯು ಮಾಡುತ್ತದೆ. ಇಂತಹ ಬಹುಪಯೋಗಿ ಕೆರೆಯನ್ನು ಮಾನವ ತನ್ನ ಸ್ವಾರ್ಥ ಸಾಧನೆಗಾಗಿ ಒತ್ತುವರಿ ಮಾಡಿಕೊಂಡು ಕೆರೆಯ ಅಸ್ತಿತ್ವವನ್ನು ಇಲ್ಲವಾಗಿಸಿದ್ದಾನೆ. ಕೆರೆಗಳನ್ನು ಸಂರಕ್ಷಿಸಿ ಅವುಗಳನ್ನು ಪುನಶ್ಚೇತನಗೊಳಿಸುವುದರ ಮೂಲಕ ನಮ್ಮ ಮುಂದಿನ ಪೀಳಿಗೆಗೆ ಅಗಾಧವಾದ ಕೊಡುಗೆಗಳನ್ನು ನೀಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ನಮ್ಮೂರ ಕೆರೆ ಪರಿಕಲ್ಪನೆಯನ್ನು ಜಾರಿಗೆ ತರಲು ಸರ್ಕಾರವು ನಿರ್ಣಯಿಸಿದ್ದು, ಪಂಚಾಯತ್ ರಾಜ್ ಇಂಜನಿಯರಿಂಗ್, ಜಲಾನಯನ ಅಭಿವೃದ್ಧಿ ಇಲಾಖೆಗಳ ಸೇವೆಯನ್ನು ಪಡೆದು ಪಂಚಾಯತಿ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿನ ಕೆರೆಗಳನ್ನು ಸಂರಕ್ಷಿಸಿ ಪುನಶ್ಚೇತನಗೊಳಿಸುವ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಿಂದ 12,000 ಕೆರೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿ ಸಂಖ್ಯೆ: ಗ್ರಾಅಪ 186 ಉಖಾಯೋ 2013, ದಿನಾಂಕ: 14.08.2013ರ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ. ಅದರಂತೆ ಕ್ರಮ ವಹಿಸಲು ಸೂಚಿಸಿದೆ..

(ಟಿ.ಎಂ. ವಿಜಯಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

8/9

ಸರಬರಾಜು ಯೋಜನೆಗಳಡಿ ಲಭ್ಯವಿರುವ ಅನುದಾನಗಳನ್ನು ಬಳಸಿಕೊಂಡು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

12. ನಮ್ಮ ಹೊಲ–ನಮ್ಮ ದಾರಿ ಪರಿಕಲ್ಪನೆಯ ಅನುಷ್ಠಾನ:

ಗ್ರಾಮಗಳು ಬಹುಪಾಲು ಅವಲಂಬನೆಯಾಗಿರುವುದು ಕೃಷಿಯ ಮೇಲೆ. ಕೃಷಿ ಭೂಮಿಗಲು ಗ್ರಾಮೀಣ ಜನತೆಯ ಕರ್ಮ ಭೂಮಿಗಳು, ಗ್ರಮಗಳನ್ನು ಸುತ್ತುವರಿದಂತೆ ಕೃಷಿ ಭೂಮಿಗಳು ಬಹು ವಿಸ್ತಾರವಾಗಿ ಹಂಚಿಕೆಯಾಗಿರುತ್ತವೆ. ಕೆಲವೇ ಆಯ್ದ ಭೂಮಿಗಳಿಗೆ ಮಾತ್ರ ಅಧಿಕೃತ ರಸ್ತೆ ಸಂಪರ್ಕಗಳು ಇದ್ದು ಉಳಿದ ಬಹುಪಾಲು ಕೃಷಿ-ಭೂಮಿಗಳಿಗೆ ಅಧಿಕೃತ ಸಮರ್ಪಕ ರಸ್ತೆ ಸಂಪರ್ಕಗಳಿರುವುದಿಲ್ಲ. ಇಂತಹ ಕೃಷಿ ಭೂಮಿಗಳ ರೈತರು ತಮ್ಮ ಭೂಮಿಗಳನ್ನು ಸಂಪರ್ಕಿಸಲು ಅನಧಿಕೃತ ಕಾಲುದಾರಿಗಳು ಇಲ್ಲವೆ ದೂರದ ಸುತ್ತುಬಳಸಿ ದಾರಿಗಳನ್ನು ಅವಲಂಬಿಸಿರುತ್ತಾರೆ. ಸಂಪರ್ಕ ಇಲ್ಲದಿರುವಂತಹ ಕೃಷಿ ಭೂಮಿಗಳಿಗೆ ನಮ್ಮ ಹೊಲ-ನಮ್ಮ ದಾರಿ ಪರಿಕಲ್ಪನೆಯಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನಗಳನ್ನು ಬಳಸಿಕೊಂಡು ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸಂಖ್ಯೆ: ಗ್ರಾಅಪ 472 ಉಖಾಯೋ 2013, ದಿನಾಂಕ: 13.08.2013ರ ಸರ್ಕಾರದ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿದ್ದು ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ.

13. ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗಗಳನ್ನು ಸೃಷ್ಟಿಸಲು ಬೇಕಾದ ಸೌಕರ್ಯಗಳನ್ನು ಒದಗಿಸುವುದು:

ಸ್ವ ಉದ್ಯೋಗಳಿಗೆ ಅವಕಾಶ ಮಾಡುವುದರಿಂದ ಗ್ರಾಮೀಣ ಆರ್ಥಿಕತೆಯು ಸದೃಢಗೊಳ್ಳುತ್ತದೆ. ಗ್ರಾಮೀಣ ಬಡತನ ನಿವಾರಣೆಯ ಉದ್ದೇಶದಿಂದ ಗ್ರಾಮೀಣ ಜನತೆಗೆ ಸ್ವ ಉದ್ಯೋಗ ಅವಕಾಶಗಳನ್ನು ಹಲವಾರು ಯೋಜನೆಗಳ . ಮೂಲಕ ಸರ್ಕಾರದ ವತಿಯಿಂದ ಕಲ್ಪಿಸಲಾಗುತ್ತಿದೆ. ಸ್ವ ಉದ್ಯೋಗವಕಾಶ ಕಲ್ಪಿಸಲು ಗ್ರಾಮೀಣ ಯುವಕ ಯುವತಿಯರಿಗೆ ಕುಶಲತೆ ಮತ್ತು ತರಬೇತಿ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ಜಾರಿಯಲ್ಲಿರುವ ವಿವಿಧ ಇಲಾಖೆಗಳ, ವಿವಿಧ ಕಾರ್ಯಕ್ರಮಗಳು, ಆರ್-ಸೆಟ್ (R-sets)ಗಳು, ಕಾರ್ಯಕ್ರಮಗಳು ಮತ್ತು ಹೊಸದಾಗಿ ಪ್ರಾರಂಭಿಸಲಾಗುವ ರಾಜೀವ್ ಚೈತನ್ಯ ಯೋಜನೆಯಡಿ ಲಭ್ಯವಿರುವ ಅನುದಾನಗಳನ್ನು ಈ ಉದ್ದೇಶಕ್ಕಾಗಿ ವಿನಿಯೋಗಿಸಿಕೊಳ್ಳಲು ಸೂಚಿಸಲಾಗಿದೆ.

14. ಗ್ರಾಮಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳ ನಿರ್ಮಾಣ:

ಗ್ರಾಮೀಣ ಜನತೆಯಲ್ಲಿ ಓದುವ ಹವ್ಯಾಸಗಳನ್ನು ರೂಢಿಸಿ ಅವರುಗಳು ಸಮಾಜದಲ್ಲಿ ನಡೆಯುವ ಪ್ರತಿಯೊಂದು ವಿದ್ಯಾಮಾನಗಳು/ಬೆಳವಣಿಗೆಗಳ ಬಗ್ಗೆ ಕಾತುರರಾಗಿ ಅರಿವನ್ನು ಸಂಪಾದಿಸುವಲ್ಲಿ ಗ್ರಾಮಗಳ ಸಾರ್ವಜನಿಕ ಗ್ರಂಥಾಲಯಗಳ ಪಾತ್ರ ಹಿರಿದಾದುದು.

7/9

ಅನುಕೂಲವಾಗುವ ದೃಷ್ಟಿಯಿಂದ ಧಾನ್ಯ ಒಕ್ಕಲು ಕಣಗಳನ್ನು ನಿರ್ಮಾಣ ಮಾಡಲು ನಿರ್ಣಯಿಸಿದೆ. ಅದರಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲಭ್ಯವಿರುವ ಅನುದಾನಗಳನ್ನು ಬಳಸಿಕೊಂಡು ಗ್ರಾಮಗಳಲ್ಲಿ ಧಾನ್ಯ ಒಕ್ಕಲು ಕಣಗಳನ್ನು ನಿರ್ಮಾಣ ಮಾಡಲು ಸೂಚಿಸಲಾಗಿದೆ. ಈ ಬಗ್ಗೆ ಈಗಾಗಲೇ ಸಂಖ್ಯೆ: ಗ್ರಾಅಪ 470 ಉಖಾಯೋ 2013, ದಿನಾಂಕ: 14.08.2013ರ ಸರ್ಕಾರದ ಆದೇಶ ಹೊರಡಿಸಲಾಗಿದೆ.

8. ಗ್ರಾಮಗಳಲ್ಲಿ ಬಯಲು ರಂಗಮಂದಿರಗಳ ನಿರ್ಮಾಣ:

ಜನಪದಗಳು, ರೂಢಿಗರ ಸಂಪ್ರದಾಯಗಳು, ಪದ್ಧತಿಗಳು, ಪರಂಪರೆಗಳು, ಉತ್ಸವಗಳು, ಮೇಳಗಳು, ಇತ್ಯಾದಿಗಳು ಗ್ರಾಮೀಣ ಸಿರಿವಂತಿಕೆಯ ದ್ಯೋತಕಗಳು. ಗ್ರಾಮೀಣ ಸಾಂಸ್ಕೃತಿಕ ಸಂರಚನೆಯಲ್ಲಿ ಇವುಗಳ ಪಾತ್ರ ಅನನ್ಯವಾದುದು. ಗ್ರಾಮೀಣ ಜನತೆಯಲ್ಲಿನ ಸೃಜನಶೀಲತೆಯನ್ನು ಅಭಿವ್ಯಕ್ತಗೊಳಿಸಲು ಒಂದು ವೇದಿಕೆಯ ಅಗತ್ಯವಿದೆ. ಗ್ರಾಮೀಣ ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆಯಿಂದಾಗಿ ಗ್ರಾಮೀಣ ಜನರಲ್ಲಿ ಸೃಜನಶೀಲತೆ ಮತ್ತು ಉತ್ತೇಜನ ಗುಣಧರ್ಮಗಳನ್ನು ಅಭಿವೃದ್ಧಿಪಡಿಸಬಹುದು. ಈ ನಿಟ್ಟಿನಲ್ಲಿ ಗ್ರಾಮಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆಗೆ ಬಯಲು ರಂಗಮಂದಿರಗಳ ನಿರ್ಮಾಣ ಅಗತ್ಯತೆಯು ಇರುತ್ತದೆ. ಆದುದರಿಂದ ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಅವಕಾಶ ಕಲ್ಪಿಸಿರುವಂತೆ ಅನುದಾನಗಳನ್ನು ಬಳಸಿಕೊಂಡು ಗ್ರಾಮಗಳಲ್ಲಿ ಬಯಲು ರಂಗಮಂದಿರಗಳನ್ನು ನಿರ್ಮಾಣ ಮಾಡಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಗಿದೆ. ಈ ಸಂಬಂಧ ಹೊರಡಿಸಲಾಗಿರುವ ಸಂಖ್ಯೆ: ಗ್ರಾಅಪ 21 ಗ್ರಾಪಸ 2013, ದಿನಾಂಕ:27.06.2013ರ ಆದೇಶ ಮತ್ತು ದಿನಾಂಕ:01.10.2013ರ ತಿದ್ದುಪಡಿ ಆದೇಶದ ರೀತ್ಯಾ ಕ್ರಮವಹಿಸುವುದು.

9. ಪ್ರತಿ ಗ್ರಾಮ ಪಂಚಾಯತ್ ಹಂತದಲ್ಲಿ ನಾಗರಿಕ ಸೇವಾ ಕೇಂದ್ರಗಳ ಸ್ಥಾಪನೆ:

ಗ್ರಾಮೀಣ ಪ್ರದೇಶದ ಜನತೆ ಯಾವುದೇ ದಾಖಲಾತಿಗಳನ್ನು ಸರ್ಕಾರದ ಸಂಸ್ಥೆಗಳಿಂದ ಪಡೆಯಬೇಕಾಗಿದಲ್ಲಿ ವಿಶೇಷವಾಗಿ ಕಂದಾಯ ಇಲಾಖೆಯ ದಾಖಲಾತಿಗಳನ್ನು ಪಡೆಯಲು ಹೋಬಳಿ ಮಟ್ಟದ ನಾಡ ಕಚೇರಿಗೆ ಹೋಗಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಇ-ಆಡಳಿತ ಇಲಾಖೆಯ ಮುಂದಾಳತ್ವದಲ್ಲಿ ಪ್ರತಿ ಗ್ರಾಮ ಪಂಚಾಯತಿಯ ಹಂತದಲ್ಲಿ ನಾಗರೀಕ ಸೇವಾ ಕೇಂದ್ರಗಳ ಸ್ಥಾಪನೆಗಾಗಿ ಈ ಇಲಾಖೆಯು ತನ್ನ ಸಹಮತಿಯನ್ನು ನೀಡಿರುತ್ತದೆ. ಇದರಿಂದಾಗಿ ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿನ ನಾಗರೀಕರಿಗೂ ಸರ್ಕಾರದ ವಿಭಿನ್ನ ಇಲಾಖೆಗಳಿಂದ ಪಡೆಯಬೇಕಿರುವ ದಾಖಲಾತಿಗಳು, ಯೋಜನೆಗಳ ಮಾರ್ಗದರ್ಶನ ಮತ್ತು ಸವಲತ್ತುಗಳನ್ನು ಗ್ರಾಮದ ಮಟ್ಟದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗುವುದು.

**10. ಗ್ರಾಮೀಣ ನಿರುದ್ಯೋಗ ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ:**

ಗ್ರಾಮೀಣ ಜನ ಸಂಖ್ಯೆಯಲ್ಲಿ ಬಹುಪಾಲು ಯುವಜನರಿದ್ದು, ಹೆಚ್ಚು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಭಾಗಶಃ ಉದ್ಯೋಗಿಗಳಾಗಿದ್ದಾರೆ. ಇದಲ್ಲದೆ ಗ್ರಾಮೀಣ ಹಂತದಲ್ಲಿ ಬಹಳಷ್ಟು ಮರೆಮಾಚಿದ ನಿರುದ್ಯೋಗ ಇರುತ್ತದೆ. ಗ್ರಾಮೀಣ ಯುವಕ ಯುವತಿಯರು ಹೆಚ್ಚಿನ ಕೌಶಲ್ಯಗಳು ಮತ್ತು ಉದ್ಯೋಗ ಪಡೆಯಲು ಅವಕಾಶ ಕಡಿಮೆ ಇರುತ್ತದೆ. ಈ ಯುವಜನರಿಗೆ ಕೌಶಲ್ಯಗಳ ತರಬೇತಿಯನ್ನು ನೀಡಿ ಪರ್ಯಾಯ ಅಥವಾ ಪೂರಕ ಉದ್ಯೋಗಗಳನ್ನು ಕೈಗೊಳ್ಳಲು ಅವಕಾಶಮಾಡಿಕೊಟ್ಟು ಅವರನ್ನು ಆರ್ಥಿಕವಾಗಿ ಸಬಲಗೊಳಿಸಲು ಸರ್ಕಾರ ಚಿಂತನ ನಡೆಸಿದೆ. ಈ ಹಿನ್ನಲೆಯಲ್ಲಿ ಸಂಜೀವಿನಿ (ಎನ್.ಆರ್.ಎಲ್.ಎಮ್.) ಯೋಜನೆ ಕಾರ್ಮಿಕ ಇಲಾಖೆ, ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ, ವಿವಿಧ ಅಭಿವೃದ್ಧಿ ನಿಗಮಗಳಲ್ಲಿನ ಅವಕಾಶಗಳನ್ನು ವಿನಿಯೋಗಿಸಿಕೊಂಡು ಗ್ರಾಮೀಣ ನಿರುದ್ಯೋಗ ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಆಯೋಜಿಸುವಂತೆ ಸೂಚಿಸಲಾಗಿದೆ.

**11. ನಮ್ಮ ಹಳ್ಳಿ-ನಮ್ಮ ನೀರು ಪರಿಕಲ್ಪನೆಯ ಅನುಷ್ಠಾನ:**

ಓಡುವ ನೀರನ್ನು ನಡೆಯುವಂತೆ, ನಡೆಯುವ ನೀರನ್ನು ನಿಲ್ಲುವಂತೆ, ನಿಂತ ನೀರನ್ನು ಇಂಗುವಂತೆ ಮಾಡುವ ಪರಿಕಲ್ಪನೆ ತುಂಬಾ ಪುರಾತನವಾದುದು. ಇದನ್ನು ಕಾರ್ಯಾನುಷ್ಠಾನಕ್ಕೆ ತರಲು ಇಲಾಖೆಯು ಬದ್ಧವಾಗಿರುತ್ತದೆ. ಹಳ್ಳಿಗಳಲ್ಲಿ ಜನ ಮತ್ತು ಜಾನುವಾರುಗಳಿಗೆ ಅವರ ಅಗತ್ಯಕ್ಕನುಗುಣವಾಗಿ ಕುಡಿಯಲು ಮತ್ತು ಬಳಸಲು ಶುದ್ಧ ಮತ್ತು ಸುರಕ್ಷಿತ ನೀರನ್ನು ಒದಗಿಸುವುದು ಇಂದು ನಮ್ಮ ಮುಂದಿರುವ ಬಹುದೊಡ್ಡ ಸವಾಲಾಗಿರುತ್ತದೆ. ಗ್ರಾಮೀಣ ಜನತೆ ತಮ್ಮ ನೀರಿನ ಅಗತ್ಯತೆಗಾಗಿ ನೀರಿನ ಹಲವು ಸಂಪನ್ಮೂಲಗಳಾದ ಕೆರೆ ಕಟ್ಟೆಗಳು, ಕಲ್ಯಾಣಿಗಳು, ತೊರೆಗಳು, ತೆರೆದ ಭಾವಿಗಳು ಮತ್ತು ಕೊಳವೆ ಭಾವಿಗಳು ಆಶ್ರಯಿಸಿದ್ದಾರೆ. ಗ್ರಾಮಗಳಲ್ಲಿರುವ ಪ್ರತಿಯೊಬ್ಬರು ಸಾಮೂಹಿಕವಾಗಿ ಭಾಗೀದಾರರಾಗಿ ನೀರಿನ ಆಗರಗಳಾದ ಹಳ್ಳಿಗಳಲ್ಲಿನ ಕೆರೆ ಕಟ್ಟೆಗಳು, ಕಲ್ಯಾಣಿಗಳು, ತೊರೆಗಳು, ತೆರೆದ ಭಾವಿಗಳು ಮತ್ತು ಕೊಳವೆ ಭಾವಿಗಳಿಗೆ ನೀರನ್ನು ಹರಿಸುವ ಅಥವಾ ಜಲ ಮರುಪೂರಣ ಮಾಡುವ ನಮ್ಮ ಹಳ್ಳಿ – ನಮ್ಮ ನೀರು ಪರಿಕಲ್ಪನೆ ಸಾಕಾರಗೊಳಿಸುವಲ್ಲಿ ಸಕ್ರಿಯರಾಗಬೇಕಿದೆ. ನೀರನ್ನು ಹರಿಸುವ ಅಥವಾ ಜಲ ಮರುಪೂರಣ ಮಾಡುವಂತಹ ಕಾಮಗಾರಿಗಲನನು ಸಾರ್ವಜನಿಕರ ಸಹಭಾಗಿತ್ವದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯ ಸೇವೆಯನ್ನು ಪಡೆದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಜಲಾನಯನ ಅಭಿವೃದ್ಧಿ ಯೋಜನೆಗಳು ಅಥವಾ ಗ್ರಾಮೀಣ ನೀರು

5. ಗ್ರಾಮಗಳಲ್ಲಿ ಹೊರಭಾಗದಲ್ಲಿ ರುದ್ರಭೂಮಿ ನಿರ್ಮಾಣ:

ಗ್ರಾಮಗಳಲ್ಲಿ ಮೃತರ ಅಂತ್ಯಕ್ರಿಯೆಗಳನ್ನು ನಡೆಸಲು ರುದ್ರಭೂಮಿಯು ಅತ್ಯಂತ ಅವಶ್ಯಕವಾಗಿದೆ. ಈ ಅಂಶವನ್ನು ಸರ್ಕಾರವು ಗಣನೆಗೆ ತೆಗೆದುಕೊಂಡು ಗ್ರಾಮಗಳಲ್ಲಿ ರುದ್ರಭೂಮಿ-ಅಭಿವೃದ್ಧಿ ಪಡಿಸಲು ನಿರ್ಣಯಿಸಿದೆ. ಅದರಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲಭ್ಯವಿರುವ ಅನುದಾನಗಳನ್ನು ಬಳಸಿಕೊಂಡು ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ರುದ್ರಭೂಮಿಯನ್ನು ಅಭಿವೃದ್ಧಿ ಪಡಿಸಲು ಸೂಚಿಸಲಾಗಿದೆ. ಈ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು ಆಯುಕ್ತಾಲಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ವತಿಯಿಂದ ಮಾದರಿ ಅಂದಾಜನ್ನು ಹೊರಡಿಸಲಾಗುವುದು.

6. ಗ್ರಾಮಗಳಲ್ಲಿ ಕುರಿದೊಡ್ಡಿ/ದನದ ದೊಡ್ಡಿಗಳ ನಿರ್ಮಾಣ:

ಜಾನುವಾರುಗಳ ಸಾಕಾಣಿಕೆಯು ಗ್ರಾಮೀಣ ಜನ ಸಮುದಾಯದಲ್ಲಿ ಬಹಳ ಹಿಂದಿನಿಂದಲೂ ರೂಢಿಸಿಕೊಂಡು ಬಂದ ಒಂದು ಪರ್ಯಾಯ ಉದ್ಯೋಗವಾಗಿದೆ. ಕರ್ನಾಟಕ ಗ್ರಾಮೀಣ ಭಾಗಗಳಲ್ಲಿ ಜಾನುವಾರುಗಳ ಪೈಕಿ ಕುರಿ ಮತ್ತು ದನಗಳ ಸಾಕಾಣಿಕೆ ಹೆಚ್ಚಿನ ಪ್ರಮಣದಲ್ಲಿರುತ್ತದೆ. ಜಾನುವಾರುಗಳಿಗೆ ಆಶ್ರಯ ಕಲ್ಪಿಸಲು ಗ್ರಾಮೀಣ ಭಾಗಗಳಲ್ಲಿ ಸೂಕ್ತ ವ್ಯವಸ್ಥೆಗಳು ಇಲ್ಲದಿರುವುದರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮೊದಲ ಆದ್ಯತೆ ಮೇಲೆ ಹಾಗೂ ತದನಂತರ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳ ಹಾಗೂ ಮಾದರಿ ಅಂದಾಜುಗಳು ಕಟ್ಟುನಿಟ್ಟಾದ ಅನುಪಾಲನೆಗೆ ಒಳಪಡಿಸಿ ಕುರಿದೊಡ್ಡಿ/ದನದ ದೊಡ್ಡಿಗಳನ್ನು ನಿರ್ಮಾಣಮಾಡಲು ಸೂಚಿಸಲಾಗಿದೆ.

7. ಗ್ರಾಮದ ಕೃಷಿಕರಿಗೆ ಸಾಮೂಹಿಕವಾಗಿ ನೆರವಾಗುವಂತೆ ಧಾನ್ಯಗಳ ಒಕ್ಕಲು ಕಣಗಳ ನಿರ್ಮಾಣ:

ಗ್ರಾಮೀಣ ಬದುಕು ಮತ್ತು ಕೃಷಿಯ ಪರಸ್ಪರ ಹಾಗೂ ಒಂದಕ್ಕೊಂದು ಅವಲಂಬಿತವಾಗಿರುವಂತಹವು. ಗ್ರಾಮಗಳಲ್ಲಿ ಕೆಲವೇ ಬೆರಳೆಣಿಕೆಯಷ್ಟು ಕುಟುಂಬಗಳು ಮಾತ್ರ ದೊಡ್ಡ ಪ್ರಮಾಣದಲ್ಲಿ ಕೃಷಿ ಭೂಮಿಯನ್ನು ಹೊಂದಿದ್ದು, ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಬೇಕಾದ ಇತರೆ ಸೌಕರ್ಯಗಳಾದ ಯಂತ್ರೋಪಕರಣಗಳು, ಕಾರ್ಮಿಕರು, ಜಾನುವಾರುಗಳು ಮತ್ತು ಧಾನ್ಯ ಒಕ್ಕಲು ಕಣಗಳನ್ನು ಹೊಂದಿರುತ್ತವೆ. ಗ್ರಾಮಗಳಲ್ಲಿ ಎಲ್ಲಾ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳು ತಮ್ಮ ಕೃಷಿ ಆಧಾರಿತ ಚಟುವಟಿಕೆಗಳ ಈಡೇರಿಕೆಗೆ ಸೌಕರ್ಯಗಳನ್ನು ಹೊಂದಲು ಪರಿತಪಿಸುವಂತಹ ಸ್ಥಿತಿ ಇರುತ್ತದೆ. ಆದುದರಿಂದ ಸರ್ಕಾರವು ಈ ಬಗ್ಗೆ ಗಮನ ಹರಿಸಿ ಗ್ರಾಮಗಳಲ್ಲಿನ ರೈತರಿಗೆ

3. ಗ್ರಾಮೀಣ ರಸ್ತೆಗಳ ನಿರ್ಮಾಣ:

ರಾಜ್ಯದ ಅಭಿವೃದ್ಧಿಯಲ್ಲಿ ರಸ್ತೆಗಳ ಪಾತ್ರ ಗಮನಾರ್ಹವಾದುದು. ಅಧಿಕ ಸಂಖ್ಯೆಯ ಉತ್ತಮ ರಸ್ತೆಗಳು ಶೀಘ್ರಗತಿ ಬೆಳವಣಿಗೆಗೆ ದಾರಿಮಾಡಿಕೊಡುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ 58183 ಕಿ.ಮೀ ಡಾಂಬರೀಕರಣಗೊಂಡ ರಸ್ತೆಗಳು, 21494 ಕಿ.ಮೀ ಜಲ್ಲಿ ರಸ್ತೆಗಳು ಹಾಗೂ 75866 ಕಿ.ಮೀ ಗಳಷ್ಟು ಉದ್ದದ ಮಣ್ಣಿನ ರಸ್ತೆಗಳಿವೆ. ಈ ಅಂಕಿ ಸಂಖ್ಯೆಗಳನ್ನು ಪರಿಶೀಲಿಸಲಾಗಿ ಬಹಳಷ್ಟು ಉದ್ದದ ರಸ್ತೆಗಳು ಇನ್ನೂ ಜಲ್ಲಿ ಮತ್ತು ಮಣ್ಣಿನ ರಸ್ತೆಗಳಾಗಿದ್ದು ಇವುಗಳನ್ನು ಅಭಿವೃದ್ಧಿ ಮಾಡುವ ಅಗತ್ಯವಿರುತ್ತದೆ. ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಿ ವ್ಯಾಪಕ ಗ್ರಾಮೀಣ ಸಂಚಾರಗಳಿಗೆ ಅವಕಾಶಮಾಡಿಕೊಟ್ಟು ಗ್ರಾಮೀಣ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಚೇತರಿಕೆಗೆ ಕೊಡುಗೆಗಳಾಗಿ ನೀಡಬಹುದು. ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ನಮ್ಮ ಗ್ರಾಮ ನಮ್ಮ ರಸ್ತೆ, ನಮ್ಮ ಹೊಲ ನಮ್ಮ ದಾರಿ, ಆರ್.ಐ.ಡಿ.ಎಫ್. ಯೋಜನೆ, ಗ್ರಾಮೀಣ ಸಂಪರ್ಕ ಸಾಮಾನ್ಯ ಮತ್ತು ವಿಶೇಷ ಅಭಿವೃದ್ಧಿ ಯೋಜನೆ, 13ನೇ ಹಣಕಾಸು ಯೋಜನೆ ಮತ್ತು ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿಗಳಲ್ಲಿ ವ್ಯಾಪಕವಾಗಿ ಅನುದಾನಗಳನ್ನು ಒದಗಿಸಲಾಗುತ್ತಿದೆ. ಈ ಅನುದಾನಗಳನ್ನು ವಿನಿಯೋಗಿಸಿಕೊಂಡು ಗ್ರಾಮೀಣ ರಸ್ತೆಗಳನ್ನು ಉತ್ತಮ ಗುಣಮಟ್ಟದೊಂದಿಗೆ ಅಭಿವೃದ್ಧಿಪಡಿಸಲು ಸೂಚಿಸಲಾಗಿದೆ. ನಮ್ಮ ಹೊಲ ನಮ್ಮ ದಾರಿ ಕಾಮಗಾರಿಗಳನ್ನು ಒಗ್ಗೂಡಿಸುವಿಕೆ ಮೂಲಕ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೆಗೆದುಕೊಳ್ಳಬಹುದು.

4. ಗ್ರಾಮಗಳಲ್ಲಿ ಆಟದ ಮೈದಾನಗಳ ಅಭಿವೃದ್ಧಿ:

ಗ್ರಾಮೀಣ ಜನಸಂಖ್ಯೆಯಲ್ಲಿ ಹೆಚ್ಚಿನವರು ಯುವಕ, ಯುವತಿಯರು ಮತ್ತು ಮಕ್ಕಳು ಆಗಿರುವುದನ್ನು ಗುರುತಿಸಲಾಗಿದೆ. ಇವರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಹಾಗೂ ಇವರ ಭೌತಿಕ ವಿಕಾಸಕ್ಕಾಗಿ ಯುವಕ, ಯುವತಿಯರು ಮತ್ತು ಮಕ್ಕಳಿಗೆ ಸಮರ್ಪಕ ಆಟದ ಮೈದಾನಗಳು ಗ್ರಾಮೀಣ ಭಾಗಗಳಲ್ಲಿ ಇಲ್ಲದಿರುವುದನ್ನು ಕಾಣಬಹುದು. ಈ ಇಲಾಖೆಯು ಗ್ರಾಮೀಣ ಭಾಗದ ಯುವಕರು, ಯುವತಿಯರು ಮತ್ತು ಮಕ್ಕಳಿಗೆ ಸಮರ್ಪಕ ಆಟದ ಮೈದಾನಗಳನ್ನು ಒದಗಿಸಲು ಮುಂದಾಗಿದೆ. ಆದುದರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲಭ್ಯವಿರುವ ಹಾಗೂ ಬೇರೆ ಯೋಜನೆಗಳಲ್ಲಿ ಅಥವಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಒದಗಿಸುವ ಅನುದಾನಗಳನ್ನು ಬಳಸಿಕೊಂಡು ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ ಒಂದು ಸಮರ್ಪಕ ಆಟದ ಮೈದಾನವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಗ್ಗೂಡಿಸುವಿಕೆ ಮೂಲಕ ಅಭಿವೃದ್ಧಿ ಪಡಿಸಲು ಸೂಚಿಸಲಾಗಿದೆ.

ಬದ್ಧತೆಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಹಂತದಲ್ಲಿ ಪ್ರಥಮ ಆದ್ಯತೆ ಮೇರೆಗೆ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರಸ್ತುತ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮಗಳಡಿಯಲ್ಲಿ ಕೈ ಪಂಪು ಮತ್ತು ಕೊಳವೆ ಬಾವಿ ಕಾರ್ಯಕ್ರಮಗಳು, ಕಿರು ನೀರು ಸರಬರಾಜು ಯೋಜನೆಗಳು, ಕೊಳವೆ ಬಾವಿ ನೀರು ಸರಬರಾಜು ಯೋಜನೆಗಳು, ಮರುಭೂಮಿ ಅಭಿವೃದ್ಧಿ ಯೋಜನೆಗಳು, ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಮತ್ತು ಸುವರ್ಣ ಜಲ, ಜಲಮಣಿ ಮತ್ತು ಹೈಡ್ರೋಫ್ರ್ಯಾಕ್ಚರಿಂಗ್ ಯೋಜನೆಗಳಡಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಸಹಯೋಗದಲ್ಲಿ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಮೂಲಭೂತ ಸೌಕರ್ಯವನ್ನು ಒದಗಿಸಲಾಗುತ್ತಿದೆ. ವಿಶೇಷವಾಗಿ ಕುಡಿಯುವ ನೀರಿನಲ್ಲಿ ಗುಣಮಟ್ಟದ ಮೌಲ್ಯಮಾಪನಕ್ಕಾಗಿ ಸಹ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಲ್ಲಿ ಹೆಚ್ಚು ಒತ್ತು ನೀಡಲು ಸೂಚಿಸಲಾಗಿದೆ. ಕುಡಿಯುವ ನೀರಿನ ಯೋಜನೆಗಳಡಿ ಹೆಚ್ಚಿನ ಪ್ರಮಾಣದಲ್ಲಿ ವೈಯಕ್ತಿಕ ನಲ್ಲಿ (Individual household tap connections) ಸಂಪರ್ಕಗಳನ್ನು ನೀಡಲು ಒತ್ತು ನೀಡಿ ಶೇ 80% ರಷ್ಟು ಮನೆಗಳಿಗೆ ಸಂಪರ್ಕಗಳನ್ನು ನಿಯಮಾನುಸಾರ ಒದಗಿಸಲು ಗ್ರಾಮ ಪಂಚಾಯತಿಗಳು ಕ್ರಮ-ಜರುಗಿಸಬೇಕು.

2. <u>ಗ್ರಾಮಗಳಲ್ಲಿ ವೈಯಕ್ತಿಕ ಶೌಚಾಲಯ ವ್ಯವಸ್ಥೆ ಒದಗಿಸುವುದು:</u>

ಗ್ರಾಮೀಣ ಜನರ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಹಾಗೂ ಮಹಿಳೆಯರು ಮತ್ತು ಮಕ್ಕಳ ಸುರಕ್ಷ ಜೀವನಕ್ಕಾಗಿ ನೈರ್ಮಲ್ಯದ ಪಾತ್ರ ಅಗಾಧವಾಗಿದೆ. ಎಲ್ಲಿ ನೈರ್ಮಲ್ಯವಿರುವುದಿಲ್ಲವೋ ಅಲ್ಲಿ ಆರೋಗ್ಯವನ್ನು ಕಾಣಲು ಸಾಧ್ಯವಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಿತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳು ಶಾಲೆಯಲ್ಲಿ ದಾಖಲಾಗುತ್ತಿರುವುದರಿಂದ ವ್ಯಾಪಕವಾಗಿ ಆರೋಗ್ಯಕರ ಜೀವನ ನಡೆಸಲು ಆಸಕ್ತಿ ಹೆಚ್ಚಾಗಿರುತ್ತದೆ. ಆದಕಾರಣ, ಈ ಬೇಡಿಕೆಯನ್ನು ಪೂರೈಸಲು ನಿರ್ಮಲ ಭಾರತ ಅಭಿಯಾನದಡಿಯಲ್ಲಿ ಈಗಾಗಲೇ ಈ ವರ್ಷ 6 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಲು ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಇವುಗಳನ್ನು ಪ್ರಚಲಿತ ನಿರ್ಮಲ ಭಾರತ ಅಭಿಯಾನ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಕೈಗೆತ್ತಿಕೊಳ್ಳುವುದು. ಶಾಲಾ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣಕ್ಕೂ ಸಹ ಆದ್ಯತೆ ನೀಡುವುದು. ಗ್ರಾಮ ಪಂಚಾಯತ್ ಹಂತದಲ್ಲಿ ತ್ಯಾಜ್ಯ ವಸ್ತು ವಿಲೇವಾರಿ ಘಟಕಕ್ಕೆ ಜಾಗವನ್ನು ಗುರುತಿಸಲು ಮತ್ತು ಅಲ್ಲಿ ಸ್ಥಾವರವನ್ನು ಸ್ಥಾಪಿಸಲು ಸಹ ಉತ್ತೇಜನ ನೀಡಲು ಸೂಚಿಸಲಾಗಿದೆ. ಇವುಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸುವಿಕೆ ಮೂಲಕ ಸಹ ಕೈಗೊಳ್ಳಬಹುದು.

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಪ 85 ತಾಪಸ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 07.10.2013

## ಸುತ್ತೋಲೆ

ವಿಷಯ: ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸಲು ಗುರುತಿಸಲಾಗಿರುವ 15 ಪ್ರಮುಖ ಮೂಲಭೂತ ಸೌಕರ್ಯಗಳನ್ನು ಪ್ರತಿ ಗ್ರಾಮ ಪಂಚಾಯತಿಯಲ್ಲಿಯೂ ಒದಗಿಸುವ ಬಗ್ಗೆ.

ಜನಗಣತಿ 2011ರ ಪ್ರಕಾರ ಕರ್ನಾಟಕದಲ್ಲಿ 6.11 ಕೋಟಿ ಜನ ಸಂಖ್ಯೆ ಇರುತ್ತದೆ. ಇದರಲ್ಲಿ ಶೇಕಡಾ 61.43% ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಿರುತ್ತಾರೆ. ಕರ್ನಾಟಕ ಬಹುಭಾಗ ಗ್ರಾಮಗಳಿಂದ ಕೂಡಿದೆ. ಪ್ರಸ್ತುತ ಕರ್ನಾಟಕದಲ್ಲಿ 5629 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 27397 ಗ್ರಾಮಗಳು ಹಾಗೂ 59532 ಜನವಸತಿಗಳು ಇರುತ್ತವೆ. ಗ್ರಾಮೀಣ ಭಾಗದಲ್ಲಿ ನೆಲೆಸಿರುವ ಜನತೆಗೆ ಅವರ ದೈನಂದಿನ ಜೀವನವು ಸುಗಮವಾಗಿ ನಡೆಸಲು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಮೂಲಕ ಅವರ ಜೀವನ ಮಟ್ಟವನ್ನು ಸುಧಾರಿಸುವುದು ಇಂದಿನ ಪ್ರಥಮ ಆದ್ಯತೆಯಾಗಿರುತ್ತದೆ. ಈ ಮೂಲಕ ಗ್ರಾಮೀಣ ಜನರು ಸಹ ನಗರ ಪ್ರದೇಶದ ಜನಗಳಂತೆ ಕನಿಷ್ಠ ಸೌಲಭ್ಯಗಳಿಂದ ವಂಚಿತರಾಗುವುದನ್ನು ತಪ್ಪಿಸಬಹುದಾಗಿದೆ. ಗ್ರಾಮೀಣ ಜನರಿಗೆ ಅಗತ್ಯವಿರುವ 15 ಮೂಲಭೂತ ಸೌಕರ್ಯಗಳನ್ನು ಪಟ್ಟಿ ಮಾಡಲಾಗಿದೆ. ಹಾಗೂ ಗುರುತಿಸಲಾದ ಈ ಮೂಲಭೂತ ಸೌಲಭ್ಯಗಳನ್ನು ಅವುಗಳ ಮುಂದೆ ಹೆಸರಿಸಲಾದ ಯೋಜನೆ/ಕಾರ್ಯಕ್ರಮಗಳ ಮಾರ್ಗಸೂಚಿಗಳನ್ವಯ ವಾರ್ಷಿಕ/ಪೂರಕ ಕ್ರಿಯಾ ಯೋಜನೆಗಳಲ್ಲಿ ಅಳವಡಿಸಿಕೊಂಡು ನಿಯಮಾನುಸಾರ ಅನುಷ್ಠಾನಗೊಳಿಸಲು ಈ ಮೂಲಕ ಸೂಚಿಸಲಾಗಿದೆ.

1. <u>ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸುವುದು:</u>

ಗ್ರಾಮೀಣ ಜನತೆಗೆ ಅಗತ್ಯ ಪ್ರಮಾಣದಲ್ಲಿ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು ಈ ಇಲಾಖೆಯ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ 2013-14ನೇ ಆಯವ್ಯಯ ಭಾಷಣದಲ್ಲಿ ಘೋಷಿಸಲಾದಂತೆ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಮಾಡಲಾಗುವುದು. ಗ್ರಾಮೀಣ ಭಾಗಗಳ ಪ್ರತಿ ಕುಟುಂಬಗಳಿಗೆ ದಿನನಿತ್ಯ 55 ಎಲ್.ಪಿ.ಸಿ.ಡಿ ಯಷ್ಟು ಶುದ್ಧ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ